'ನೆಹರು ಸೆಂಟರ್'ಗೆ ದೇಶವಿದೇಶಗಳ ಚಿಂತಕರು, ಕಲಾವಿದರು ಬರುತ್ತಿದ್ದರು. ಆ ವೇಳೆಗೆ ಹಲವು ಮೇರು ಸಂಸ್ಥೆಗಳ ಜವಾಬ್ದಾರಿಯನ್ನು ನಿರ್ವಹಿಸಿದ್ದ ಕಾರ್ನಾಡರು ನೆಹರು ಸಂಸ್ಥೆಗೂ ಹೊಸ ಜೀವಂತಿಕೆ ತಂದಿದ್ದರು. ನೆಹರು ಸೆಂಟರ್‌ನಲ್ಲಿ ಒಂದು ಭಾಷಣ ನೀಡಲಿಕ್ಕಾಗಿ ಕಾರ್ನಾಡರು ನನ್ನನ್ನು ಇಂಗ್ಲೆಂಡ್‌ಗೆ ಕರೆಸಿಕೊಂಡಿದ್ದರು. ಯೂರೋಪಿನ ಹಲವು ದೇಶಗಳಂತೆಯೇ ಇಂಗ್ಲೆಂಡ್ ಪ್ರವಾಸ ಬಹಳ ದುಬಾರಿ. ಕಾರ್ನಾಡರ ಆಹ್ವಾನದ ನೆಪದಲ್ಲಿ ನಾನು ಲಂಡನ್ ಸುತ್ತಾಡಿಕೊಂಡು, ಹಾಗೆಯೇ ಇಂಗ್ಲೆಂಡಿನ ವುಲ್ವರ್ಹಾಂಟನ್ ಎಂಬ ಊರಿನಲ್ಲಿದ್ದ ನಮ್ಮ ಸೋದರಮಾವ ಡಾ. ಜಿ.ಎಸ್. ಶಿವಪ್ರಸಾದ್ ಅವರ ಕುಟುಂಬದೊಂದಿಗೆ ಸ್ವಲ್ಪ ದಿನ ಕಳೆದು ಭಾರತಕ್ಕೆ ಮರಳುವುದು ಸೇರಿದಂತೆ ಒಂದೂವರೆ ತಿಂಗಳ ಕಾರ್ಯಕ್ರಮ ಹಾಕಿಕೊಂಡಿದ್ದೆ. ಲಂಡನ್ ತಲುಪಿದ ಮೊದಲ ಎರಡು ಮೂರು ದಿನ ನೆಹರು ಸೆಂಟರ್ ಆಸುಪಾಸಿನಲ್ಲಿದ್ದ ಜಾಗಗಳನ್ನು ಮಾತ್ರ ನೋಡಿದ್ದೆ. ಹೊಸ ಜಾಗವಾದ್ದರಿಂದ ಬಹಳ ದೂರ ಹೋಗಲು ಅಳುಕಿತ್ತು. ಒಂದು ಬೆಳಗ್ಗೆ ಕಾರ್ನಾಡರು 'ಇವತ್ತು ಏನು ಕಾರ್ಯಕ್ರಮ ನಿಮ್ಮದು?' ಎಂದು ಕೇಳಿದರು. (ಕಾರ್ನಾಡರು ಎಲ್ಲರನ್ನು ಬಹುವಚನದಲ್ಲಿಯೇ ಮಾತನಾಡಿಸುತ್ತಿದ್ದರು. ಅವರು ಯಾವ ವಯಸ್ಸಿನವರಾಗಿದ್ದರು ಸರಿ). ನಾನು 'ಇನ್ನೂ ಯೋಚನೆ ಮಾಡಿಲ್ಲ' ಎಂದೆ. 'ರೆಡಿ ಆಗಿ ಹಾಗಾದ್ರೆ. ನನಗೂ ಇವತ್ತು ಕೆಲಸ ಇಲ್ಲ. ನಿಮ್ಮ ಜೊತೆ ಬರ್ತೀನಿ. ಲಂಡನ್ ನೋಡ್ಕೋಣ.' ಎಂದರು.

'ಲಂಡನ್‌ನ ಸರಿಯಾದ ಪರಿಚಯ ಆಗಬೇಕು ಅಂದ್ರೆ ಕಾಲ್ನಡಿಗೆಯಲ್ಲಿ ಹೋಗಬೇಕು. ನಿಮಗೆ ಅದು ಒಪ್ಪಿಗೆಯೇ?' ಎಂದರು. ನಾನು ಕಾರ್ನಾಡರ ಜೊತೆ ಲಂಡನ್ ಪರಿಚಯ ಆಗುವ ಸಂಭ್ರಮದಲ್ಲಿ ಹುಮ್ಮಸ್ಸಿನಿಂದ ಒಪ್ಪಿದೆ. ಅಂದು ಅನೇಕ ಮ್ಯೂಸಿಯಂಗಳು, ಚಿತ್ರಕಲಾ ಗ್ಯಾಲರಿಗಳು, ಐತಿಹಾಸಿಕ ಜಾಗಗಳನ್ನು ಅವರು ಪರಿಚಯಿಸಿದರು. ಲಂಡನ್‌ನ ಪಬ್ ಒಂದರಲ್ಲಿ ಅಲ್ಲಿಯ ಸ್ಥಳೀಯ ಸ್ಟೌಟ್ ಬಿಯರ್ ತರಿಸಿದರು. 'ಲಂಡನ್ನಿನ ಮತ್ತೊಂದು ಸ್ಥಳೀಯ ವಿಶೇಷ ಇದು. ಸ್ಟೌಟ್ ಬಿಯರ್ ಹಾಗು **Fish and Chips**' ಎಂದು ಹೇಳಿದರು. ಆ ವೇಳೆಗಾಗಲೇ ಮಧ್ಯಾಹ್ನ ಆಗಿತ್ತು. ಕಾಲ್ನಡಿಗೆಯಲ್ಲಿ ಸುಮಾರು ಹದಿನೈದು ಕಿಲೋಮೀಟರ್ ನಡೆದಿದ್ದೆವು. 'ಕಾಲು ನೋಯ್ತಿದ್ಯಾ? ಟ್ಯಾಕ್ಸಿ ಅಥವಾ ಟ್ಯೂಬ್ ಟ್ರೈನ್‌ನಲ್ಲಿ ಹೋಗಬಹುದು ಬೇಕಿದ್ರೆ?' ಎಂದು ಆಗಾಗ ಕೇಳುತ್ತಿದ್ದರು. ಆಗ ನನಗೆ 28, ಕಾರ್ನಾಡರಿಗೆ 64 ವರ್ಷ. ನನಗೆ ಸ್ವಲ್ಪ ಸುಸ್ತಾಗಿತ್ತು ನಿಜ. ಆದರೆ ಕಾರ್ನಾಡರ ಹುಮ್ಮಸ್ಸು, ಉತ್ಸಾಹ ಹಾಗೂ ಅವರು ಅಂದು ನೀಡಿದ್ದ ಹಲವಾರು ವಿಷಯಗಳ ಭಂಡಾರ ಎಲ್ಲವು ನನ್ನನ್ನು ಆವರಿಸಿಬಿಟ್ಟಿದ್ದವು. ಆ ದಿನ ಸಂಜೆ ಮನೆಗೆ ಮರಳುವ ವೇಳೆಗೆ 25 ಕಿ.ಮೀ.ಗೂ ಹೆಚ್ಚು ನಡೆದಿದ್ದೆವು. ಆ ದಿನದ ಅನುಭವದಿಂದ ನನ್ನ ಮೊದಲಿನ ಅಳುಕು ನಿವಾರಣೆಗೊಂಡು, ನಾನು ಹೆಚ್ಚೆಚ್ಚು ಸಂಚಾರ ಮಾಡಲು ಪ್ರಾರಂಭಿಸಿದೆ. ಅದಾದ ಕೆಲವು ದಿನಗಳ ನಂತರ ಕಾರ್ನಾಡರು, ಇಂಗ್ಲೆಂಡಿನ ಒಂದು ಸಂಸ್ಥೆ ಕ್ಯಾನ್ಸರ್ ರೋಗದ ಬಗ್ಗೆ ಸಾಕ್ಷ್ಯಚಿತ್ರ ತಯಾರಿಸುತ್ತಿದೆ. ಇದಕ್ಕಾಗಿ ನಿರ್ದೇಶಕರನ್ನ ಹುಡುಕುತ್ತಿದ್ದಾರೆಂದು ಹೇಳಿದರು. ಆ ಸಂಸ್ಥೆಗೆ ನಾನು ಕೂಡ ಅರ್ಜಿ ಹಾಕಿದೆ. ಸಂದರ್ಶನ ಮಾಡಿದ ನಂತರ ಆ ಸಾಕ್ಷ್ಯಚಿತ್ರಕ್ಕೆ ನನ್ನನ್ನು ನಿರ್ದೇಶಕನಾಗಿ ಆರಿಸಿದರು. ಅದು ಸುಮಾರು ಆರು ತಿಂಗಳ ಅವಧಿಯ ಕೆಲಸವಾಗಿತ್ತು. ಆ ಸಾಕ್ಷ್ಯಚಿತ್ರದ ಚಿತ್ರೀಕರಣವನ್ನು ಲಂಡನ್ ಅಲ್ಲದೆ, ಬರ್ಮಿಂಗ್‌ಹ್ಯಾಮ್, ಲೆಸ್ಟರ್, ಆಕ್ಸ್‌ಫರ್ಡ್ – ಹೀಗೆ ಇಂಗ್ಲೆಂಡಿನ ಇತರ ನಗರಗಳಲ್ಲೂ ಆಯೋಜಿಸಲಾಗಿತ್ತು. ನಾನು ಮತ್ತಷ್ಟು ವಿಸ್ತಾರವಾಗಿ ಇಂಗ್ಲೆಂಡ್ ನೋಡಲು ಅದೊಂದು ಅವಕಾಶವಾಯ್ತು. ಅಲ್ಲಿಯವರೆಗೆ ಕಾರ್ನಾಡರ ನೆಹರು ಸೆಂಟರ್‌ನ ಅಧಿಕೃತ ಮನೆಯಲ್ಲಿದ್ದ ನಾನು, ಸಾಕ್ಷ್ಯಚಿತ್ರ ನಿರ್ದೇಶನದ ಸಮಯದಲ್ಲಿ ಬೇರೊಂದು ಮನೆಯಲ್ಲಿ ಬಾಡಿಗೆಗೆ ಇರಲು ನಿರ್ಧರಿಸಿದೆ. ಕಾರ್ನಾಡರ ಪತ್ನಿ ಸರಸ್ವತಿ ಅವರು ತಮ್ಮ ಪರಿಚಯದವರ ಮನೆಯಲ್ಲಿ ಪೇಯಿಂಗ್ ಗೆಸ್ಟ್ ಆಗಿ ಉಳಿದುಕೊಳ್ಳಲು ಸಹಾಯ ಮಾಡಿದರು. ಆಗಲೂ ಪ್ರತಿ ವಾರದ ಕೊನೆಗೆ ನಾನು ಕಾರ್ನಾಡರ